

بسم اللهِ الرّحمٰن الرّحيم

# ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ವಿವರಿಸಿದ ಕೆಲವು ವಿಶ್ವಾಸ ವರ್ಧಕ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **14-11-2014** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

*(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ)* **ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:**

ಇಂದಿನ ಖುತುಬದಲ್ಲಿ ಸಹ ನಾನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು ವಿವರಿಸಿದ ಕೆಲವು ಸಂಭವಗಳನ್ನು ಪ್ರಸ್ತಾಪಿಸುವೆನು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದುದು ಅವರು ನನ್ನ ಪಿತನಾದ ಕಾರಣದಿಂದಲ್ಲ. ನನ್ನ ವಯಸ್ಸು ಹನ್ನೊಂದು ವರ್ಷ ಪೂರ್ಣವಾಗಲಿದ್ದಾಗ ನಾನು ದೃಢ ನಿರ್ಧಾರ ಮಾಡಿದೆನು: ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದಗಳನ್ನು ಅಧ್ಯಯನ ಮಾಡುವೆನು. ಅದರಲ್ಲಿ ಅವರು ಸುಳ್ಳುವಾದಿ ಎಂದು (ನಊದುಬಿಲ್ಲಾಹ್) ನನಗೆ ದೃಢವಾದರೆ ನಾನು ಮನೆ ಬಿಟ್ಟು ಹೋಗುವೆನು ಎಂದು. ಆದರೆ ನನಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯಸಂಧತೆ ಮನವರಿಕೆ ಆಯಿತು. ನನ್ನ ವಿಶ್ವಾಸ ವರ್ಧಿಸುತ್ತಾ ಮುಂದುವರಿಯಿತು. ಅವರು ಮೃತರಾದಾಗ ನನ್ನ ನಂಬಿಕೆ ಇನ್ನಷ್ಟು ದೃಢಗೊಂಡಿತು."

ಹತ್ತು ವರ್ಷದ ಪ್ರಾಯದಲ್ಲಿ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೈಗೆ ಕೈ ಇಟ್ಟು ಬೈಅತ್ ಮಾಡಿದಾಗ ನನ್ನ ಭಾವನೆಗಳ ಸರೋವರದಲ್ಲಿ ಎಂತಹ ಪರಿವರ್ತನೆಗಳುಂಟಾಯಿತೆಂದರೆ ಅವುಗಳನ್ನು ವಿವರಿಸಲಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನನ್ನ ಬಾಲ್ಯದಲ್ಲಿಯೇ ನನಗೆ ಪ್ರಾರ್ಥನೆ ಬಗ್ಗೆ ಪ್ರೋತ್ಸಾಹನೆ ನೀಡುತ್ತಿದ್ದರು. ಅಲ್ಲಾಹನಿಂದ ಮಹ್‌ದೀ ಮಸೀಹರಾಗಿ ನೇಮಿಸಲ್ಪಟ್ಟ ಹಝ್ರತ್ ಮಸೀಹ್ ಅಲೈಹಿಸ್ಸಲಾಮರಿಗೆ ಅಲ್ಲಾಹನು ಹೀಗೆ ಸಂದೇಶವಾಣಿ ಅವತೀರ್ಣಗೊಳಿಸಿದ್ದನು. **ಉಜೀಬು ಕುಲ್ಲಿ ದುಆಇಕ ಇಲ್ಲಾ ಫೀ ಶುರಕಾಇಕ.** 'ನಿನ್ನ ಎಲ್ಲಾ ಪ್ರಾರ್ಥನೆಗಳನ್ನು ಅಂಗೀಕರಿಸುವೆನು. ಕುಟುಂಬದ ಸಂಪತ್ತಿನಲ್ಲಿ ನಿನಗೆ ಭಾಗೀದಾರರಾದವರ ಪರವಾಗಿ ಮಾಡಿದ ಪ್ರಾರ್ಥನೆ ಹೊರತು.'

ಇಂತಹ ವಾಗ್ದಾನ ಅಲ್ಲಾಹನಿಂದ ದೊರೆತಿದ್ದರೂ ಹೆನ್ರಿ ಮಾರ್ಟಿನ್ ಕ್ಲಾರ್ಕ್ ಕೊಲೆ ಮೊಕದ್ದಮೆಯನ್ನು ಹೂಡಿದಾಗ ಒಂಬತ್ತು ವರ್ಷ ಪ್ರಾಯದ ನನ್ನೊಂದಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪ್ರಾರ್ಥಿಸಲು ಹೇಳಿದರು. ಮನೆಯ ಪುರುಷ ಮತ್ತು ಸ್ತ್ರೀ ಕೆಲಸಗಾರರೊಂದಿಗೆ ಸಹ ಪ್ರಾರ್ಥಿಸಲು ಹೇಳಿದರು. ಯಾವ ಮಹಾನುಭಾವರೊಂದಿಗೆ ಅಲ್ಲಾಹನು "ನಿನ್ನ ಎಲ್ಲಾ ಪ್ರಾರ್ಥನೆಗಳು ಅಂಗೀಕರಿಸಲ್ಪಡುವುವು" ಎಂದು ಹೇಳಿದ್ದನೋ ಅವರು ಅನ್ಯರಿಂದಲೂ ದುಆ ಮಾಡಿಸಬೇಕಾದುದು ಆವಶ್ಯಕ ಎಂದು ತಿಳಿದಿರುವಾಗ ಇತರರು ಈ ವಿಷಯದ ಬಗ್ಗೆ ಎಷ್ಟು ಲಕ್ಷ್ಯ ನೀಡಬೇಕಾಗಿದೆ ಎನ್ನುವುದು ಸ್ಪಷ್ಟವಾಗುತ್ತದೆ.

**'ಉಜೀಬು ಕುಲ್ಲಿ ದುಆಇಕ ಇಲ್ಲಾ ಫೀ ಶುರಕಾಇಕ'** ಎಂಬ ಇಲ್‌ಹಾಮ್ ಬಗ್ಗೆ ಪ್ರಾಯಶಃ ಕೆಲವರಿಗೆ ತಿಳಿದಿರಲಾರದು. ಕುಟುಂಬ ಸ್ವತ್ತಿನ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಭಾಗೀದಾರರು ಮೊಕದ್ದಮೆ ಹೂಡಿದ್ದರು. ಆಗ ಅವರೊಂದಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನೀವು ಮೊಕದ್ದಮೆಗೆ ಅನಾವಶ್ಯಕವಾಗಿ ಹಣ ಖರ್ಚು ಮಾಡಬೇಡಿರಿ. ನೀವು ಸೋತು ಹೋಗುವಿರಿ ಎಂದು. ಆ ಮೊಕದ್ದಮೆಯ ತೀರ್ಪು ಕೆಳ ನ್ಯಾಯಾಲಯದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹೋದರನ ಪರವಾಗಿ ಆಯಿತಾದರೂ ಅನಂತರ ಮೇಲ್ಮನವಿ ಮಾಡಿದಾಗ ಚೀಫ್ ಕೋರ್ಟಿನಲ್ಲಿ ಸಹೋದರನಿಗೆ ಸೋಲು ಉಂಟಾಯಿತು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಈ ಮೊಕದ್ದಮೆಯಲ್ಲಿ ನನ್ನ ಸಹೋದರನಿಗೆ ಜಯಸಿಗಲು ಹೇಗೆ ತಾನೆ ಸಾಧ್ಯ? ಅವರು ಸೋಲುವರೆಂದು ಅಲ್ಲಾಹನು ಸ್ಪಷ್ಟವಾಗಿ ತಿಳಿಸಿದ್ದನು.

ಗೋಡೆಗೆ ಸಂಬಂಧಿಸಿದ ಮೊಕದ್ದಮೆ ಬಹಳ ಪ್ರಸಿದ್ಧವಾದುದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪಿತೃ ಕುಟುಂಬದ ಕೆಲವರು ರಸ್ತೆಗೆ ಅಡ್ಡವಾಗಿ ಗೋಡೆ ನಿರ್ಮಿಸಿ ಮಸ್‌ಜಿದ್‌ಗೆ ಹೋಗುವ ದಾರಿಯನ್ನು ಮುಚ್ಚಿದ್ದರು. ಕೆಲವು ಅಹ್ಮದಿಯರು ಸಿಟ್ಟುಗೊಂಡು ಆ ಗೋಡೆ ಕೆಡವಲು ಬಯಸಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹಾಗೆ ಮಾಡಲು ಅನುಮತಿಸಲಿಲ್ಲ. "ನಾವು ಸಹನೆ ದೋರಬೇಕು. ನಿಯಮಗಳನ್ನು ಪಾಲಿಸಬೇಕು" ಎಂದು ಹೇಳಿದರು.

ಇದಕ್ಕೆ ಸಂಬಂಧಿಸಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ– ನಾನೊಂದು ಸ್ವಪ್ನ ಕಂಡೆನು. ಜನರು ಗೋಡೆ ಕೆಡವುತ್ತಾ ಇದ್ದಾರೆ. ಒಂದೊಂದು ಇಟ್ಟಿಗೆ ಎತ್ತಿ ಎಸೆಯುತ್ತಿದ್ದಾರೆ. ಅದಕ್ಕಿಂತ ಸ್ವಲ್ಪ ಮೊದಲು ಮಳೆ ಸುರಿದಂತೆ ಭಾಸವಾಯಿತು. ಗೋಡೆ ಕೆಡವಿದ ರಸ್ತೆಯಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹೋಗುತ್ತಿದ್ದಾರೆ. ನಂತರ ಈ ಮೊಕದ್ದಮೆಯ ತೀರ್ಪು ಬಂದಾಗ ಗೋಡೆ ಕೆಡವಿ ಹಾಕಲಾಯಿತು. ನನ್ನ ಸ್ವಪ್ನದ

ಬಗ್ಗೆ ನಾನು ಮುಂಚಿತವಾಗಿ ತಿಳಿಸಿದ ಕಾರಣ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಆ ದಾರಿಯಾಗಿ ಬಂದು ಹೇಳಿದರು: "ಪ್ರಿಯ ಮಹಮೂದ್ ನೋಡು ನಿನ್ನ ಸ್ವಪ್ನ ಈಡೇರಿತು."

ಮಕ್ಕಳ ಮನವೊಲಿಸುವ ಬಗ್ಗೆ ಒಂದು ಘಟನೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸಿದ್ದಾರೆ: ನನ್ನ ತಾಯಿ ನನ್ನ ಬಗ್ಗೆ ಸಿಟ್ಟಾದಾಗಲೆಲ್ಲಾ ಹೇಳುತ್ತಿದ್ದರು, ಈ ಹುಡುಗನ ತಲೆ ಬಹಳ ಚಿಕ್ಕದಾಗಿದೆ ಎಂದು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಿದ್ದರು– ಅದು ಮುಖ್ಯ ವಿಷಯವಲ್ಲ. ಮುಖ್ಯವಾದುದೇನೆಂದರೆ ನಾವು ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಆಜ್ಞೆಗಳನ್ನು ಅರ್ಥಮಾಡಿಕೊಳ್ಳಬೇಕು. ಅವುಗಳ ಬಗ್ಗೆ ಚಿಂತಿಸಬೇಕು. ಪವಿತ್ರ ಖುರ್‌ಆನನ್ನು ಅಧ್ಯಯನ ಮಾಡಬೇಕು. ಅದರ ಮೂಲಕವೇ ಮಸ್ತಿಷ್ಕ ಪ್ರಕಾಶಮಾನವಾಗುತ್ತದೆ.

ನಾನು ಬಾಲಕನಾಗಿದ್ದಾಗಲೇ ಸರಕಾರಕ್ಕೆ ನಿಷ್ಠೆ ಸೂಚಿಸುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಉಪದೇಶಿಸುವುದನ್ನು ಆಲಿಸಿ ಅದರ ಬಗ್ಗೆ ದೃಢ ನಿರ್ಧಾರ ಕೈಗೊಂಡೆನು. ಬ್ರಿಟಿಷರು ನಮಗೆ ವ್ಯಕ್ತಿ ಸ್ವಾತಂತ್ರ್ಯ ನೀಡಿದರು. ಅದೊಂದು ಅನುಗ್ರಹವಾಗಿದೆ. ಆದುದರಿಂದ ಆಂಗ್ಲೇಯರನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೊಗಳಿದರು. ಪ್ರವಾದಿಗಳ ಹೃದಯ ಬಹಳ ಕೃತಜ್ಞತೆ ಸೂಚಿಸುವುದಾಗಿರುತ್ತದೆ. ಚಿಕ್ಕಪುಟ್ಟ ಉಪಕಾರಗಳನ್ನೂ ಸಹ ಬಹಳ ದೊಡ್ಡದಾಗಿ ಗಣಿಸುತ್ತಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಲೇಖನಿ ಮೂಲಕ ನಡೆಸಿದ ಜಿಹಾದ್ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅನೇಕ ಗ್ರಂಥಗಳನ್ನು ಬರೆಯುವುದರಲ್ಲಿ ತಲ್ಲೀನರಾಗಿ ಹಲವಾರು ರಾತ್ರಿಗಳಲ್ಲಿ ನಿದ್ರೆ ಮಾಡುತ್ತಲೇ ಇರಲಿಲ್ಲ. ಕೆಲವು ಸಾರಿ ನಾನು ನಿದ್ರಿಸಲು ತೊಡಗುವಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬರೆಯುತ್ತಾ ಇರುವುದನ್ನು ಕಾಣುತ್ತಿದ್ದೆ. ನಾನು ನಿದ್ರೆಯಿಂದ ಎಚ್ಚೆತ್ತಾಗ ಸಹ ಅವರು ಬರೆಯುತ್ತಿದ್ದುದಾಗಿ ಕಾಣುತ್ತಿದ್ದೆ. ಅವರು ಬರೆಯುತ್ತಾ ಬೆಳಗಾಗುತ್ತಿತ್ತು.

ಸಹಾಬರು (ಶಿಷ್ಯರು) ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಬಹಳ ಗೌರವ ನೀಡುತ್ತಿದ್ದರು. ಈ ಕುರಿತು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ನಮ್ಮ ಯುವ ಜನರು ಇಸ್ಲಾಮೀ ಶಿಷ್ಟಾಚಾರಗಳ ಬಗ್ಗೆ ಯಾವಾಗಲೂ ಗಮನ ಕೊಡಬೇಕು. ನಮ್ಮ ಯುವ ಜನರಿಗೆ ಇಸ್ಲಾಮೀ ಶಿಷ್ಟಾಚಾರ ಕಲಿಸುವ ಬಗ್ಗೆ ಶ್ರದ್ಧೆ ನೀಡಲಾಗುತ್ತಿಲ್ಲ. ಯುವಕರು ಒಬ್ಬರಿನ್ನೊಬ್ಬರ ಹೆಗಲಿಗೆ ಕೈಹಾಕಿ ತಿರುಗಾಡುತ್ತಿದ್ದಾರೆ. ನನ್ನ ಬಾಲ್ಯಕಾಲದಲ್ಲಿ ನನಗೆ ದೊರೆತ ತರಬೇತಿಯ ಪ್ರಭಾವ ಈಗ ಸಹ ನನ್ನ ಮೇಲಿದೆ. ಒಮ್ಮೆ ನಾನು ಒಬ್ಬ ಹುಡುಗನ ಭುಜಕ್ಕೆ ನನ್ನ ಮೊಣಕೈ ಊರಿ ನಿಂತಿದ್ದನ್ನು ಮಾಸ್ಟರ್ ಖಾದರ್ ಭಕ್ಷ್ ಸಾಹೇಬ್(ಮೌಲವಿ ಅಬ್ದುರ್ರಹೀಮ್ ದರ್ದ್ ಸಾಹೇಬರ ಪಿತ) ಕಂಡು ನನ್ನನ್ನು ಅದರಿಂದ ತಡೆದು ಹಾಗೆ ಮಾಡುವುದು ಒಳ್ಳೆಯದಲ್ಲ ಎಂದು ಹೇಳಿದರು. ಆಗ ನನ್ನ ಪ್ರಾಯ ಹನ್ನೆರಡು–ಹದಿಮೂರು ವರ್ಷ ಆಗಿರಬಹುದು. ಆದರೆ ಅಂದಿನ ಆ ಚಿತ್ರ ನನ್ನೆದುರಿಗೆ ಬರುವಾಗಲೆಲ್ಲಾ ನಾನು ಅವರಿಗೋಸ್ಕರ ಪ್ರಾರ್ಥಿಸುತ್ತೇನೆ. ಇನ್ನೊಂದು ಘಟನೆ ಹೀಗಿದೆ. ಗುರುದಾಸಪುರದಲ್ಲಿ ಒಂದು ಮೊಕದ್ದಮೆ ಬಗ್ಗೆ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೋಗಿದ್ದೆ. ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಜೊತೆ ಮಾತನಾಡುವಾಗ "ತುಮ್" ಎಂದು ಹೇಳಿದೆ. ಆಗ ಮುರಾದಾಬಾದಿನ ಸೂಬೇದಾರ್ ಸಾಹೇಬರು ನನ್ನನ್ನು ಪಕ್ಕಕ್ಕೆ ಕರೆದುಕೊಂಡು ಹೋಗಿ ನನ್ನೊಂದಿಗೆ ಹೇಳಿದರು– ನೋಡಿರಿ, ತಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪುತ್ರರಾದ ಕಾರಣ ನಾವು ನಿಮಗೆ ಗೌರವ ನೀಡುತ್ತೇವೆ. ಆದರೆ "ತುಮ್" ಎಂಬ ಶಬ್ದವನ್ನು ಪರಸ್ಪರ ಸಮಾನರಾದವರ ಬಗ್ಗೆ ಮಾತ್ರ ಬಳಸಲಾಗುತ್ತದೆ. ಹಿರಿಯರೊಂದಿಗೆ ಮಾತನಾಡುವಾಗ ಆ ಪದ ಬಳಸಬಾರದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಡನೆ ಮಾತನಾಡುವಾಗ ತಾವು "ತುಮ್" ಎಂಬ ಪದ ಬಳಸುವುದನ್ನು ನಾನು ಸಹಿಸಲಾರೆ" ಎಂದು ಹೇಳಿದರು.

ಹಿರಿಯರೊಂದಿಗೆ ಮಾತನಾಡುವಾಗ ಪಾಲಿಸಬೇಕಾದ ಶಿಷ್ಟಾಚಾರದ ಪ್ರಥಮ ಪಾಠ ನನಗೆ ಅದಾಗಿತ್ತು. ಇಸ್ಲಾಮೀ ಶಿಷ್ಟಾಚಾರಗಳನ್ನು ಪಾಲಿಸಲು ನಾವು ವಿಶೇಷ ಶ್ರದ್ಧೆ ನೀಡಬೇಕು. ಹಝ್ರತ್ ಮುಸ್ಲಿಹ್ ಮೌಊದ್(ರ) ಇನ್ನೊಂದು ಸಂಭವವನ್ನು ಹೀಗೆ ವಿವರಿಸುತ್ತಾರೆ: ನಾವು ಬಾಲ್ಯದಲ್ಲಿ ವಿವಿಧ ಆಟಗಳನ್ನು ಆಡುತ್ತಿದ್ದೆವು. ಸಾಮಾನ್ಯವಾಗಿ ಫುಟ್‌ಬಾಲ್ ಆಡುತ್ತಿದ್ದೆವು. ಖಾದಿಯಾನಿಗೆ ಕೆಲವು ಕ್ರಿಕೆಟ್ ಆಟಗಾರರು ಬಂದಿದ್ದರು. ಅವರು ಒಂದು ಕ್ರಿಕೆಟ್ ಟೀಮ್ ರಚಿಸಿದರು. ಒಮ್ಮೆ ಅವರು ನನ್ನ ಬಳಿ ಬಂದು ಹೇಳಿದರು: ನೀವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಕ್ರಿಕೆಟ್ ಆಡಲು ಬರಬೇಕೆಂದು ಹೇಳಿರಿ. ನಾನು ಮನೆಯೊಳಗೆ ಹೋದಾಗ ಅವರು ಒಂದು ಗ್ರಂಥ ಬರೆಯುವುದರಲ್ಲಿ ನಿರತರಾಗಿದ್ದರು. ನಾನು ಅವರ ಹತ್ತಿರ ಹೋಗಿ, ಬಂದ ಉದ್ದೇಶದ ಬಗ್ಗೆ ಹೇಳಿದಾಗ ಅವರು ಲೇಖನಿ ಕೆಳಗಿಟ್ಟು ಹೇಳಿದರು– ನೀವು ಆಡುವ ಕ್ರಿಕೆಟ್ ಆಟದ ಚೆಂಡು ಗ್ರೌಂಡಿನಿಂದ ಹೊರಗೆ ಹೋಗದು. ಆದರೆ ನಾನು ಆಡುವ ಕ್ರಿಕೆಟ್ ಆಟದ ಚೆಂಡು ಲೋಕದ ಎಲ್ಲೆಗಳ ತನಕ ತಲಪುವುದು. ಈಗ ನೋಡಿರಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಚೆಂಡು ಲೋಕದ ಮೂಲೆಮೂಲೆಗಳನ್ನು ತಲಪಲಿಲ್ಲವೇ? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು

ಖಾದಿಯಾನಿನಿಂದ ಹೊಡೆದ ಚೆಂಡು ಅದಾಗಿದೆ. ಅದು ಲೋಕದ ಅಂಚುಗಳಿಗೆ ತಲಪುತ್ತಾ ಇದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಇನ್ನೊಂದು ಸಂಭವವನ್ನು ಹೀಗೆ ವಿವರಿಸುತ್ತಾರೆ: ಕಠಿಣ ಪರಿಶ್ರಮ ಮಾಡದೆ ಯಾರಿಗೂ ಲೌಕಿಕವಾಗಿ ಅಥವಾ ಧಾರ್ಮಿಕವಾಗಿ ಗೌರವ ಗಳಿಸಲು ಸಾಧ್ಯವಾಗದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾ ಇದ್ದರು– ನಮ್ಮ ಕಾಲಘಟ್ಟದಲ್ಲಿ ಎಲ್ಲಾ ಗೌರವಗಳು ನಮ್ಮೊಂದಿಗೆ ಸಂಬಂಧಿಸುವಂತೆ ಅಲ್ಲಾಹನು ಮಾಡಿರುವನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ಕಾಲಘಟ್ಟದಲ್ಲಿ ಎಲ್ಲಾ ಗೌರವಗಳು ಅವರೊಂದಿಗೆ ಸಂಬಂಧಿಸಲ್ಪಟ್ಟಿವೆ. ಯಾರಾದರೂ ಧರ್ಮದಿಂದ ಲಾಭ ಪಡೆಯಲು ಬಯಸುವುದಾದರೆ ಅವನು ತನ್ನನ್ನು ಅಲ್ಲಾಹನ ಮುಂದೆ ಪೂರ್ಣವಾಗಿ ಅರ್ಪಿಸಬೇಕು. ಒಂದು ಜನಾಂಗವೇ ಹೀಗೆ ಮಾಡುವುದಾದರೆ ಅದಕ್ಕೆ ಅಲ್ಲಾಹನು ವಿಶಿಷ್ಟ ಅನುಗ್ರಹ ನೀಡುವನು. ಎಲ್ಲಾ ಕ್ಷೇತ್ರಗಳಲ್ಲಿ ಅವರಿಗೆ ಜಯಸಿಗುವುದು. ನಮ್ಮ ಜಮಾಅತಿನವರು ಹಾಗೆ ಮಾಡಬೇಕಾದುದು ಅತ್ಯಂತ ಆವಶ್ಯಕವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದ ಅಹ್ಮದಿಯರಾದ ನಾವು ಅನ್ಯರಿಗಿಂತ ಭಿನ್ನವಾಗಿ ಕಾಣಿಸುವವರಾಗಬೇಕು. ಅಲ್ಲಾಹನ ಅಸ್ತಿತ್ವದ ಬಗ್ಗೆ ವಿಶ್ವಾಸ ಹೊಂದಿರುವುದರಲ್ಲಿ ನಾವು ಅನ್ಯರಿಗಿಂತ ಬೇರೆಯಾಗಿ ಕಾಣಿಸುವವರಾಗಬೇಕು. ನಮ್ಮ ವಿಶ್ವಾಸ ಅನ್ಯರಿಗಿಂತ ಹೆಚ್ಚು ದೃಢವಾಗಿರಬೇಕು. ಅಲ್ಲಾಹನನ್ನು ಆರಾಧಿಸುವುದರಲ್ಲೂ ನಾವು ಅನ್ಯರಿಗಿಂತ ಹೆಚ್ಚು ನಿಷ್ಠಾವಂತರಾಗಬೇಕು. ಉನ್ನತ ನೈತಿಕ ಮಟ್ಟವನ್ನು ತಲಪಲು ನಾವು ಅನ್ಯರಿಗಿಂತ ಹೆಚ್ಚು ಪರಿಶ್ರಮಪಡಬೇಕು. ಉನ್ನತ ನೈತಿಕ ಗುಣಗಳಲ್ಲಿ ನಮಗೆ ವಿಶಿಷ್ಟ ಸ್ಥಾನ ಲಭಿಸಬೇಕು. ಸರಕಾರಿ ನಿಯಮಗಳ ಪಾಲನೆಯಲ್ಲೂ ನಾವು ಮಾದರಿಯಾಗಬೇಕು. ಒಟ್ಟಾರೆ ಪ್ರತಿಯೊಂದು ವಿಷಯದಲ್ಲೂ ಅಹ್ಮದಿಯರು ಇತರರಿಗಿಂತ ಉತ್ತಮ ಸ್ಥಾನ ಹೊಂದುವ ಆವಶ್ಯಕತೆ ಇದೆ. ಹಾಗೆ ನಾವು ಆಗುವುದಾದರೆ ಮಾತ್ರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಹಾಗೆ ಬೈಅತ್‌ನಿಂದ ಸರಿಯಾದ ಲಾಭಗಳಿಸುವವರಾಗುವೆವು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಔದಾರ್ಯದಿಂದ ವರ್ತಿಸುವ ಬಗ್ಗೆ ಒಂದು ಘಟನೆ ಹೀಗೆ ವಿವರಿಸುತ್ತಾರೆ: “ಒಮ್ಮೆ ಉನ್ನತ ಸರಕಾರಿ ಅಧಿಕಾರಿಯೊಬ್ಬರು ಖಾದಿಯಾನಿಗೆ ಬಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೇಳಿದರು: ಇಲ್ಲಿನ ಜನರು ನಿಮ್ಮವರೇ ಆದ ನಾಗರಿಕರಾಗಿದ್ದಾರೆ ಅವರೊಂದಿಗೆ ಮೃದುವಾಗಿ ವರ್ತಿಸಿರಿ ಎಂದು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರೊಡನೆ ಹೇಳಿದರು– ಈ ವೃದ್ಧನೊಂದಿಗೆ ಕೇಳಿ ನೋಡಿರಿ, ಅವರು ನಮ್ಮನ್ನು ನಿಂದಿಸಲು ಬಳಸದ ಒಂದು ಸಂದರ್ಭವಾದರೂ ದಾಟಿ ಹೋಗಿದೆಯೇ? ಅವರಿಗೆ ಸಾಧ್ಯವಿರುವಷ್ಟು ನಮಗೆ ಹಾನಿ ಉಂಟುಮಾಡಲು ಅವರು ಪ್ರಯತ್ನಿಸಲಿಲ್ಲವೇ ಎಂದು. ಮತ್ತೆ ಅವರೊಂದಿಗೆಯೇ ವಿಚಾರಿಸಿರಿ, ಅವರೊಂದಿಗೆ ಔದಾರ್ಯದಿಂದ ವರ್ತಿಸಬೇಕಾದ ಸಂದರ್ಭ ಬಂದಾಗಲೆಲ್ಲಾ ನಾನು ಎಂದಾದರೂ ಅವರೊಂದಿಗೆ ಔದಾರ್ಯದಿಂದ ವರ್ತಿಸದೆ ಇದ್ದೆನೆ? ಎಂದು. ಆ ವೃದ್ಧ ಉತ್ತರ ಹೇಳದೆ ತಲೆ ತಗ್ಗಿಸಿ ಕುಳಿತರು. ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉತ್ತಮ ಸ್ವಭಾವ ಗುಣದ ವೈಭವಶಾಲಿ ಉದಾಹರಣೆಯಾಗಿದೆ. ನಮ್ಮ ಜಮಾಅತಿನ ಜನರು ಸಹ ತಮ್ಮ ಸ್ವಭಾವ ಗುಣಗಳಲ್ಲಿ ಮಾದರಿಯಾಗಬೇಕು. ನಮ್ಮ ಆರ್ಥಿಕ ವ್ಯವಹಾರ ಹೇಗಿರಬೇಕೆಂದರೆ ಮನೆಯಲ್ಲಿ ಒಂದು ಪೈಸೆ ಸಹ ಸ್ವಂತದಲ್ಲಿ ಇಲ್ಲದಿರುವಾಗಲೂ ಬೇರೆಯವರು ವಿಶ್ವಸ್ತ ನಿಧಿಯಾಗಿ ನೀಡಿದ ಹಣವನ್ನು ಬಳಸಬಾರದು. ಮಾತು ಸಿಹಿಯಾಗಿಯೂ ಪ್ರೀತಿ ಭರಿತವಾಗಿಯೂ ಅನ್ಯರ ಮೇಲೆ ಪ್ರಭಾವ ಬೀರುವಂತಹದ್ದೂ ಆಗಿರಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪದೇ ಪದೇ ಹೀಗೆ ಹೇಳುತ್ತಿದ್ದರು: ಅಲ್ಲಾಹನಿಂದ ಎರಡು ವಿಧಗಳ ಪರೀಕ್ಷೆಗಳು ಬರುತ್ತವೆ. ಒಂದು ವಿಧದ ಪರೀಕ್ಷೆಯಲ್ಲಿ ದಾಸನಿಗೆ ಸ್ವಯಂ ನಿರ್ಧಾರದ ಅಧಿಕಾರ ನೀಡಲಾಗುತ್ತಿದೆ. ಇದಕ್ಕೆ ಉದಾಹರಣೆ ಚಳಿಗಾಲದಲ್ಲಿ ಕಠಿಣ ಶೈತ್ಯದಲ್ಲಿ ತಂಗಾಳಿ ಬೀಸುತ್ತಿರುವಾಗ ತಣ್ಣೀರಿನಲ್ಲಿ ವುಝು ಮಾಡುವುದಾಗಿದೆ. ಅಂತಹ ಕಾಲದಲ್ಲಿ ಒಂದಿಷ್ಟು ತಂಗಾಳಿ ಬೀಸುವಾಗಲೂ ಮನುಷ್ಯರಿಗೆ ಕಷ್ಟವಾಗುತ್ತದೆ.”

ಎರಡನೆಯ ರೀತಿಯ ಪರೀಕ್ಷೆ ಹೇಗೆಂದು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಇಲ್ಲಿ ವಿವರಿಸಲಿಲ್ಲ. ಆದರೆ ಇದಕ್ಕೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹೇಳಿಕೆ ಈ ರೀತಿಯಿದೆ: ತನ್ನ ದಾಸರಿಗೆ ಯಾವುದೇ ಕಷ್ಟ ಉಂಟಾಗದಂತೆ ಮಾಡಲು ಹಾಗೂ ಎಲ್ಲಾ ರೀತಿಗಳಲ್ಲೂ ಸುಖ ಸಮೃದ್ಧಿಯಿಂದ ಜೀವಿಸುವಂತೆ ಮಾಡಲು ಅಲ್ಲಾಹನಿಗೆ ಸಾಮರ್ಥ್ಯವಿತ್ತು. ಅವರು ರಾಜಭೋಗದಿಂದ ಜೀವಿಸಲು ಎಲ್ಲ ಸಾಮಾಗ್ರಿಗಳನ್ನೂ ಒದಗಿಸಲು ಅವನಿಗೆ ಸಾಧ್ಯವಿತ್ತು. ಆದರೆ ಅಲ್ಲಾಹನು ಹಾಗೆ ಮಾಡಿಲ್ಲ. ಅದರಲ್ಲಿ ಒಂದು ರಹಸ್ಯವಿದೆ. ನೀವು ನೋಡಿರಿ ತಂದೆ ತಾಯಂದಿರಿಗೆ ತಮ್ಮ ಮಗಳು ಎಷ್ಟು ಪ್ರಿಯಳಾಗಿರುತ್ತಾಳೆ. ಬಹುತೇಕ ಜನರು ಮಗನಿಗಿಂತ ಮಗಳನ್ನು ಹೆಚ್ಚು ಪ್ರೀತಿಸುತ್ತಾರೆ. ಆದರೆ ಮಗಳಿಗೆ ವಿವಾಹವಾಗುವಾಗ ಅವಳನ್ನು ಗಂಡನ ಮನೆಗೆ ಕಳುಹಿಸಿ ಕೊಡುತ್ತಾರೆ. ಆ ಸಂದರ್ಭದಲ್ಲಿ ಆ ಬೇರ್ಪಾಡನ್ನು ಸಹಿಸುವುದು ಬಹಳ ಧೈರ್ಯದ ಕೆಲಸವಾಗಿರುತ್ತದೆ. ಆಗ ತಂದೆ ತಾಯಂದಿರೂ ಮಗಳೂ ಅಳುತ್ತಿರುತ್ತಾರೆ. ಹದಿನಾಲ್ಕು ಹದಿನೈದು ವರ್ಷ ಕಾಲ ಒಟ್ಟಿಗೆ ಇದ್ದು ಕೊನೆಗೆ ಮಗಳನ್ನು ತಂದೆ ತಾಯಂದಿರು ಗಂಡನ ಮನೆಗೆ ಕಳುಹಿಸಿಕೊಡುತ್ತಾರೆ. ಇಂತಹ ಬಿಳ್ಕೊಡುವಿಕೆಯನ್ನು ಕೆಲವು ಅವಿವೇಕಿಗಳ ನಿರ್ದಯತೆ ಎನ್ನಬಹುದು. ಆದರೆ ಆ ಹುಡುಗಿಯಲ್ಲಿ ಎಂತಹ ಕೆಲವು ಶಕ್ತಿಗಳು ಇರುತ್ತವೆಯೆಂದರೆ, ಅವಳು ತಂದೆ ತಾಯಂದಿರರಿಂದ ದೂರ ಹೋಗಿ ಗಂಡನ ಮನೆಯಲ್ಲಿ

ಜೀವನ ಸಾಗಿಸುತ್ತಾ ಎರಡು ಕುಟುಂಬಗಳಿಗೂ ಅನುಗ್ರಹದಾಯಕಳಾಗುತ್ತಾಳೆ. ಅಲ್ಲಾಹನ ಭಕ್ತರ ಸ್ಥಿತಿ ಸಹ ಹೀಗೆಯೇ ಆಗಿದೆ. ಅವರಲ್ಲಿ ಅನೇಕ ರಹಸ್ಯ ಸದ್ಗುಣಗಳು ಇರುತ್ತವೆ. ಕಷ್ಟವನ್ನು ಅನುಭವಿಸುವಾಗ ಮಾತ್ರ ಅವು ಪ್ರಕಟವಾಗುತ್ತವೆ. ಅಲ್ಲಾಹನ ಸಾಮೀಪ್ಯಗಳಿಸಲು ಕಷ್ಟ ಸಹಿಸಬೇಕು. ಆಗಲೂ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತಾ ಇರಬೇಕು. ಪ್ರತಿಯೊಂದು ಹೊಸ ದಿನ ಹೊಸ ಮೃತ್ಯುವನ್ನು ತನ್ನ ಮೇಲೆ ಎತ್ತಿಕೊಳ್ಳಬೇಕು. ಲೌಕಿಕ ಆಶಾಭಿಲಾಷೆಗಳ ಬಗ್ಗೆ ಒಂದು ಮೃತ್ಯುವನ್ನು ತನ್ನ ಮೇಲೆ ಇಳಿಸುವಾಗ ಸತ್ಯವಿಶ್ವಾಸಿಗೆ ಹೊಸ ಜೀವವು ಲಭಿಸುತ್ತದೆ. ಅದು ಎಂದೂ ನಾಶವಾಗಲಾರದು. ಅನಂತರ ಅವನಿಗೆ ಮೃತ್ಯು ಎಂದೂ ಬಂದೆರಗದು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಇನ್ನೊಂದು ಸಂಭವವನ್ನು ಹೀಗೆ ವಿವರಿಸುತ್ತಾರೆ: ನನ್ನ ಪ್ರಾಯ ಒಂಭತ್ತು ಅಥವಾ ಹತ್ತು ವರ್ಷವಾಗಿದ್ದಾಗ ನಾನು ಮತ್ತು ಇನ್ನೊಬ್ಬ ವಿದ್ಯಾರ್ಥಿ ಮನೆಯೊಳಗೆ ಆಟ ಆಡುತ್ತಿದ್ದೆವು. ಮನೆಯೊಳಗೆ ಒಂದು ಗ್ರಂಥವಿತ್ತು. ಅದನ್ನು ತೆರೆದು ಓದಿದಾಗ ಅದರಲ್ಲಿ "ಈಗ ಜಿಬ್ರೀಲ್ ಅವತೀರ್ಣವಾಗುವುದಿಲ್ಲ" ಎಂದು ಬರೆಯಲಾಗಿತ್ತು. ನಾನು ಹೇಳಿದೆ: "ಪುಸ್ತಕದಲ್ಲಿ ಬರೆದುದು ತಪ್ಪಾಗಿದೆ ನನ್ನ ತಂದೆಯವರಿಗೆ ಜಿಬ್ರೀಲ್ ಅವತೀರ್ಣಗೊಳ್ಳುತ್ತಾರೆ" ಎಂದು. ಆ ಹುಡುಗ ಹೇಳಿದ ಜಿಬ್ರೀಲ್ ಇಳಿದು ಬರುವುದಿಲ್ಲ ಎಂದು ಗ್ರಂಥದಲ್ಲಿ ಬರೆದಿದೆ. ನಾವು ಪರಸ್ಪರ ವಾಗ್ವಾದ ಮಾಡಿದೆವು. ನಾವಿಬ್ಬರೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಮೀಪ ಹೋಗಿ ನಮ್ಮ ಚರ್ಚೆಯ ಬಗ್ಗೆ ಹೇಳಿದೆವು. ಆಗ ಅವರು ಹೇಳಿದರು: "ಗ್ರಂಥದಲ್ಲಿ ಬರೆದುದು ತಪ್ಪಾಗಿದೆ. ಜಿಬ್ರೀಲ್ ಈಗಲೂ ಇಳಿದು ಬರುತ್ತಾರೆ".

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಇನ್ನೊಂದು ಸಂಭವದ ಬಗ್ಗೆ ಹೀಗೆ ಹೇಳುತ್ತಾರೆ: ನಾನು ಈ ಸಂಭವದ ಬಗ್ಗೆ ಯೋಚಿಸಿ ನಗುತ್ತೇನೆ. ಕೆಲವು ಸಾರಿ ನಾನು ಅದರ ಬಗ್ಗೆ ಯೋಚಿಸಿ ಅಳುತ್ತೇನೆ. ಆದರೆ ನಾನು ಈ ಸಂಭವವನ್ನು ಬಹಳ ಮಹತ್ವಪೂರ್ಣವೆಂದು ಗ್ರಹಿಸುತ್ತೇನೆ. ಅದೇನೆಂದರೆ, ಒಂದು ರಾತ್ರಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ನಾವು ಸೆಖೆಯ ಕಾರಣದಿಂದ ಅಂಗಳದಲ್ಲಿ ನಿದ್ರಿಸುತ್ತಿದ್ದೆವು. ಆಕಾಶದಲ್ಲಿ ರಾತ್ರಿ ಮೋಡ ಕವಿದು ಬಹಳ ಬಿರುಸಾಗಿ ಸಿಡಿಲು ಮಿಂಚು ಪ್ರಾರಂಭವಾಯಿತು. ಆಗ ನಾವು ಎದ್ದು ಮನೆಯೊಳಗೆ ಹೋದೆವು. ಆಗ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ತಲೆಯ ಮೇಲೆ ನನ್ನ ಎರಡು ಕೈಗಳನ್ನು ಅಡ್ಡವಾಗಿ ಇರಿಸಿದೆ. ಸಿಡಿಲು ಮಿಂಚು ನನ್ನ ಮೇಲೆ ಬೀಳಲಿ ಅವರ ಮೇಲೆ ಬೀಳದಿರಲಿ ಎಂದು. ಅನಂತರ ನಾನು ಈ ಸಂಭವದ ಬಗ್ಗೆ ಯೋಚಿಸುವಾಗಲೆಲ್ಲಾ ನನಗೆ ನಗು ಬರುತ್ತಿತ್ತು. ನಾವು ಸಿಡಿಲು ಮಿಂಚುಗಳ ಹೊಡೆತದಿಂದ ರಕ್ಷಿಸಲ್ಪಟ್ಟದ್ದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾರಣದಿಂದಾಗಿದೆಯೇ ಹೊರತು ನಮ್ಮ ಕಾರಣದಿಂದ ಅವರು ಸುರಕ್ಷಿತರಾದುದಲ್ಲ ಎಂದು ನನಗೆ ಮನವರಿಕೆ ಆಯಿತು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಬರೆಯುತ್ತಾರೆ: 1905ರಲ್ಲಿ ಮೌಲವಿ ಅಬ್ದುಲ್ ಕರೀಮ್ ಸಾಹೇಬರು ನಿಧನ ಹೊಂದಿದರು. ಅವರು ಮೃತರಾದ ಸಮಾಚಾರ ನನಗೆ ತಲಪಿದಾಗ ನನಗೆ ಅದನ್ನು ಸಹಿಸಲಾಗಲಿಲ್ಲ. ನಾನು ನನ್ನ ಕೋಣೆಯೊಳಗೆ ಪ್ರವೇಶಿಸಿ ಬಾಗಿಲುಗಳನ್ನು ಮುಚ್ಚಿ ನಿರ್ಜೀವ ಶವದ ಹಾಗೆ ಮಂಚದಲ್ಲಿ ಬಿದ್ದು ಅಳಲು ತೊಡಗಿದೆ.

1908ರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನ ಹೊಂದಿದಾಗ ನನಗೆ ಬಹಳ ದುಃಖವಾಯಿತು. ಎಲ್ಲಾ ಅಹ್ಮದಿಯರ ಜೀವಿತದಲ್ಲಿ ಒಂದು ಹೊಸ ಪರಿವರ್ತನೆ ಉಂಟಾಯಿತು. ಅವರು ನಮ್ಮ ನಿರ್ಜೀವ ಶರೀರಗಳ ಆತ್ಮವಾಗಿದ್ದರು. ಅವರು ನಮ್ಮ ಕುರುಡು ಕಣ್ಣುಗಳಿಗೆ ದೃಷ್ಟಿಯಾಗಿದ್ದರು. ನಮ್ಮ ಅಂಧಕಾರಮಯ ಹೃದಯಗಳಿಗೆ ಅವರು ಪ್ರಕಾಶವಾಗಿದ್ದರು. ಅಂತಹ ಮಹಾನುಭಾವರು ನಮ್ಮನ್ನು ಬಿಟ್ಟು ಅಗಲಿ ಹೋಗಿದ್ದಾರೆ! ಅದೊಂದು ಅಗಲುವಿಕೆ ಆಗಿರಲಿಲ್ಲ. ಅದೊಂದು ಖಿಯಾಮತ್ ಆಗಿತ್ತು. ನಮ್ಮ ಕಾಲ ಕೆಳಗಿಂದ ನೆಲವು ಜಾರಿ ಹೋಯಿತು. ಆಕಾಶ ತನ್ನ ಸ್ಥಳದಿಂದ ಚಲಿಸಿತು. ಅಲ್ಲಾಹನು ನನ್ನ ಈ ಮಾತಿಗೆ ಸಾಕ್ಷಿಯಾಗಿದ್ದಾನೆ– ಆಗ ನನಗೆ ರೊಟ್ಟಿಯ ಯೋಚನೆಯಾಗಲಿ ಬಟ್ಟೆಯ ಯೋಚನೆಯಾಗಲಿ ಇರಲಿಲ್ಲ. ಆಗ ನನಗಿದ್ದ ಒಂದೇ ಒಂದು ಯೋಚನೆ ಇದು ಮಾತ್ರವಾಗಿತ್ತು. ಲೋಕದ ಎಲ್ಲರೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕೈಬಿಟ್ಟರೂ ನಾನು ಕೈಬಿಡಲಾರೆ. ನಾನು ಈ ಜಮಾಅತನ್ನು ಲೋಕದಲ್ಲಿ ಭದ್ರವಾಗಿ ಸ್ಥಾಪಿಸುವೆನು ಎಂದು. ನಾನು ನನ್ನ ಪ್ರತಿಜ್ಞೆ ಎಷ್ಟರ ಮಟ್ಟಿಗೆ ಈಡೇರಿಸಿದ್ದೇನೆ ಎಂದು ನನಗೆ ತಿಳಿಯದು. ಆದರೆ ಆ ಪ್ರತಿಜ್ಞೆಗೆ ಬದ್ಧನಾಗಿರಲು ನಾನು ಯಾವಾಗಲೂ ಪರಿಶ್ರಮಿಸಿದ್ದೇನೆ."

ಇಂದು ಅಹ್ಮದಿಯಾ ಜಮಾಅತಿನ ಪ್ರತಿಯೊಬ್ಬರು, ಮತ್ತು ಜಮಾಅತಿಗೆ ಪ್ರವೇಶಿಸುತ್ತಿರುವ ಪ್ರತಿಯೊಬ್ಬರು ಸಹ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ತನ್ನ ಪ್ರತಿಜ್ಞೆಯನ್ನು ಚೆನ್ನಾಗಿ ಈಡೇರಿಸಿದರು ಎಂಬುದಕ್ಕೆ ಸಾಕ್ಷಿಯಾಗಿದ್ದಾರೆ. ಅವರು, ನಮಗೂ ನಮ್ಮ ಪ್ರತಿಜ್ಞೆಗಳನ್ನು ಈಡೇರಿಸಲು ಸರಿಯಾದ ಮಾರ್ಗ ತೋರಿಸಿಕೊಟ್ಟರು. ನಾವು ನಮ್ಮ ಪ್ರತಿಜ್ಞೆಗಳನ್ನು ಈಡೇರಿಸುವ ಭಾಗ್ಯವನ್ನು ಅಲ್ಲಾಹನು ನಮಗೆ ನೀಡಲಿ.

ಇಂದು ಎರಡು ನಮಾಝೆ ಜನಾಝ ಇದೆ. ಒಂದು ಜನಾಝ ಹಾಝಿರ್ ಸುರಯ್ಯಾ ಬೇಗಮ್ ಸಾಹೇಬರವರದಾಗಿದೆ. ಅವರು ಚೌಧುರಿ ಅಬ್ದುರ್ರಹೀಮ್ ಸಾಹೇಬ್ ಮರ್‌ಹೂಮರ ಪತ್ನಿ ಆಗಿದ್ದರು. ಅವರು ಮ್ಯಾಂಚೆಸ್ಟರ್ ನಿವಾಸಿಯಾಗಿದ್ದರು. ಅವರು ಮೃತರಾಗುವಾಗ ಅವರ ಪ್ರಾಯ 77 ಆಗಿತ್ತು. ನವಂಬರ್ 11ರಂದು ಅವರು

ನಿಧನರಾದರು– إِنَّا لِلّٰهِ وَإِنَّا إِلَيْهِ رَاجِعُونَ ಸಾತ್ವಿಕಳೂ, ನಮಾಝ್ ಬಗ್ಗೆ ನಿಷ್ಠಾವಂತಳೂ ಸುಸ್ವಭಾವಿಯೂ ಸಹನೆ ದೋರುವವರೂ ಆಗಿದ್ದರು. ಅವರು ಮೂಸಿಯ ಆಗಿದ್ದಾರೆ. ಅವರಿಗೆ ಅಲ್ಲಾಹನು ಉನ್ನತ ಸ್ಥಾನ ನೀಡಲಿ. ಅವರ ಮಕ್ಕಳು ಅವರ ಒಳಿತುಗಳಲ್ಲಿ ಮುಂದುವರಿಯುವ ಭಾಗ್ಯ ಗಳಿಸುವವರಾಗಲಿ.

ಇನ್ನೊಂದು ಜನಾಝ ಗಾಯಿಬ್ ಆಗಿದೆ. ಯಮನಿನ ಅಬ್ದುಲ್ಲಾ ಶಬೂತಿ ಸಾಹೇಬ್ ನವೆಂಬರ್ 9ರಂದು ನಿಧನ ಹೊಂದಿದರು. إِنَّا لِلّٰهِ وَإِنَّا إِلَيْهِ رَاجِعُونَ ಅವರು 1934ರಲ್ಲಿ ಯಮನಿನಲ್ಲಿ ಜನಿಸಿದರು. ಅವರ ಪಿತ 1952ರಲ್ಲಿ ಅವರನ್ನು ಜಾಮಿಅ ಅಹ್ಮದಿಯಾದಲ್ಲಿ ಕಲಿಯಲು ರಬ್ವಕ್ಕೆ ಕಳುಹಿಸಿದರು. 1960ರಲ್ಲಿ ಮುಬಲ್ಲಿಗ್ ಆಗಿ ಯಮನ್‌ಗೆ ಹೋದರು. ಅವರು ತಮ್ಮ ಅಹ್ಮದಿ ಮತ್ತು ಅಹ್ಮದಿಯೇತರ ಬಂಧುಗಳೊಂದಿಗೆ ಒಳ್ಳೆಯ ಸಂಬಂಧ ಹೊಂದಿದ್ದರು. ಅವರು ಪತ್ನಿ ಸಯ್ಯಿದ ನಸೀಮ ಸಾಹೆಬರನ್ನೂ ಐವರು ಪುತ್ರರನ್ನೂ ಮತ್ತು ಹನ್ನೆರಡು ಮೊಮ್ಮಕ್ಕಳನ್ನೂ ಅಗಲಿದ್ದಾರೆ. ಅವರ ಒಬ್ಬ ಪುತ್ರ ಕೆನಡದಲ್ಲಿದ್ದಾರೆ ಇನ್ನೊಬ್ಬ ಪುತ್ರ ನಾಸಿರ್ ಅಹ್ಮದ್ ಇಲ್ಲಿದ್ದಾರೆ.

ಅಲ್ಲಾಹನು ಮೃತರಿಗೆ ಉನ್ನತ ಪದವಿ ನೀಡಲಿ. ಅವರ ಮಕ್ಕಳು ಅವರ ಹೆಜ್ಜೆ ಗುರುತುಗಳನ್ನು ಅನುಸರಿಸುವ ಭಾಗ್ಯ ಗಳಿಸಲಿ– ಆಮೀನ್.

---------------*****--------------

*Friday Sermon delivered by Hadrath Khaleefatul Masih Al Khamis*(*atba*)

*at Masjid Baithul Futhuh, London on 14-11-2014.*

Summarized by *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team** for **Nazarath Nashr-O-Isha'ath, Qadian**

***Email***: *khutuba.kannada@gmail.com*